ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಸಂದರ್ಭಗಳಲ್ಲಿ ಆ ರೀತಿ ಆಗುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿಯವರು.—ಇದಲ್ಲದೆ ಬೇರೆ ಇನ್ನಾವ ರೂಪದಲ್ಲಾದರೂ ಸಾಲಕೊಟ್ಟು ಇರುವ ಸಾಲವನ್ನು ತೀರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆ ಮಾಡಲಾಗುತ್ತದೆ.

Sri H. S. RUDRAPPA (Honnali).—Have the Government got any Legislation to check charging of the higher rate of interest?

Sri Kadidal MANJAPPA.—Yes. We have the Money Lenders' Act, the Agriculturists Relief Act and Usurious Loans Act.

Sri H. S. RUDRAPPA.—Have you got any machinery to find out whether these measures have been given effect to?

Sri Kadidal MANJAPPA.—Yes. We have the Courts for enforcing these enactments.

Sri H. S. RUDRAPPA.—Apart from the Courts, are there any other agency through which this could be checked?

Sri Kadidal MANJAPPA.—Under the Money Lenders' Act, private parties can prefer complaint to the Courts.

ಶ್ರೀ ಎಸ್. ಗೋಪಾಲಗೌಡರು (ಸಾಗರ-ಹೊಸನಗರ).—(d) ಪ್ರಶ್ನೆಗೆ ಕೊಟ್ಟಿರುವ ಉತ್ತರವು ಬರೀ ಊಹೆಯ ಮೇಲೋ ಅಥವಾ ಅಂಕಿ ಸಂಖ್ಯೆಗಳು ಇವೆಯೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ಯಾಂಪಲ್ ಸರ್ವೆ ಮೇಲೆ ನಮ್ಮ ಅಂದಾಜು ಮಾಡಿದೆ.

ಶ್ರೀ ಎಸ್. ಗೋಪಾಲಗೌಡರು.—ರೈತನು ಮಾರುವ ಧಾನ್ಯಗಳಿಗಿಂತ ಕೊಳ್ಳುವ ಕಬ್ಬಣ ಮುಂತಾದ ವಸ್ತುಗಳ ಬೆಲೆ ಇತ್ತೀಚೆಗೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Mr. SPEAKER.—That does not arise.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ರೈತರ ಸಾಲ ಕಡಮೆ ಮಾಡುವುದಕ್ಕೆ ಅಗ್ರಿಕಲ್ಚುರಲ್ ಕಾರ್ಪೊರೇಷನ್ ಮಾಡುವುದು ಸೂಕ್ತವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ವಿಚಾರ ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪನವರು (ಚನ್ನಪಟ್ಟಣ) ಬ್ಯಾಂಕು.—ಮತ್ತು ಸೊಸೈಟಿಗಳನ್ನು ದೇಶದ ಎಷ್ಟು ಭಾಗಗಳಲ್ಲಿ ಟ್ಟಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಡಿ. ದೇವರಾಜ ಅರಸ್‌ರವರು (ಹುಣಸೂರು).—ಕಾನೂನು ಪ್ರಕಾರ ಬಡ್ಡಿ ದರವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ಸೆಕ್ಯೂರ್ಡ್ ಸಾಲಕ್ಕೆ ಶೇಕಡ 9, ಅನ್‌ಸೆಕ್ಯೂರ್ಡ್‌ಗೆ ಶೇಕಡ 12.

ಶ್ರೀ ಡಿ. ದೇವರಾಜ ಅರಸ್‌ರವರು.—ಸಾಲ ಕೊಡುವಾಗಲೇ ಶೇಕಡ 12ರಂತೆ ಬಡ್ಡಿ ಕಟಾಯಿಸಿಕೊಂಡು ಬಾಕಿ ಮೊಬಲಗನ್ನು ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಂಥವರಿಗೆ ಯಾವ ಸರ್ಕಾರ ಬಂದರೂ ಪ್ರಯೋಜನವಿಲ್ಲ.

ಶ್ರೀ ಆರ್. ಅನಂತರಾಮರ್ಕರವರು (ಚಾಮರಾಜಪೇಟೆ).—ಈಗ ಒದಗಿಸಿರುವ ಪರಿಹಾರದಿಂದ ರೈತರಿಗೆ ಸಾಕಷ್ಟು ಪ್ರಯೋಜನವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಷ್ಟು ಹೆಚ್ಚಾಗಿ ಆಗಿಲ್ಲವೆಂದು ಗೊತ್ತಾಗಿದೆ.

ಶ್ರೀ ಆರ್. ಅನಂತರಾಮರ್ಕರವರು.—ಸಾಲದ ಹೊರೆಯಿಂದ ರೈತರ ಬೆನ್ನುಮೂಳೆ ಬಗ್ಗಿದೆಯೆಂಬುದು ಗೊತ್ತೆ?

(ಉತ್ತರವಿಲ್ಲ.)

ಶ್ರೀ ಎಸ್. ಎಂ. ಮರಿಯಪ್ಪನವರು (ಪೆರಿಯಾಪಟ್ಟಣ).—ವ್ಯವಸಾಯದ ಖರ್ಚಿಗಾಗಿ ಸಾಲ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿದೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ವ್ಯವಸಾಯಕ್ಕಾಗಿ ಅಲ್ಪಾವಧಿ ಸಾಲಗಳನ್ನು ಕೊಡುವುದಕ್ಕೆ ಸಾಧ್ಯವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ತಕಾವಿ ಸಾಲ, ಜಪಾನು ಅಭಿವೃದ್ಧಿ ಸಾಲ ಮುಂತಾದವನ್ನು ಕೊಡಲಾಗುತ್ತಿದೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಸಾಲ ಕೊಡಲಾಗುತ್ತದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು ಅನುಸೂಚಿತ ಜಾತಿಗಳು).—ಹಣದ ಲೇವಾದೇವಿದಾರರಿಗೆ ಸಂಬಂಧಪಟ್ಟ 1939 ನೆಯ ಇಸವಿಯ ಆಕ್ಟ್ ಪ್ರಕಾರ ಕೋರ್ಟ್‌ಗೆ ಎಷ್ಟು ಕೇಸುಗಳು ಬಂದಿವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

Kannegal Tank Restoration Project.

Q.—484. **Sri U. M. MADAPPA** (Chamarajanagar).—

Will the Government be pleased to state:—

the action taken by them in respect of the Kannegal Tank in Chamarajanagar Taluk, Mysore District, the waste weir of which is in a state of disrepair?

A.—**Sri Kadidal MANJAPPA** (Minister for Revenue and Public Works).—

A project for restoration of the tank is being got up.

The project for restoration includes the necessary repairs and improvements to the waste weir.

ಶ್ರೀ ಯು. ಎಂ. ಮಾದಪ್ಪನವರು.—ಈ ಯೋಜನೆ ಔಟ್ ಲೈನ್ ಏನು ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆರೆ ದುರಸ್ತು ಮಾಡುವುದಕ್ಕೆ ಎಷ್ಟು ಖರ್ಚಾಗುತ್ತದೆ, ಯಾವಯಾವ ಬಗ್ಗೆ ಎಷ್ಟೆಷ್ಟು ಖರ್ಚಾಗುತ್ತದೆ ಎಂದು ಗೊತ್ತು ಮಾಡುವುದೇ ಅದರ ಔಟ್ ಲೈನ್.

ಶ್ರೀ ಯು. ಎಂ. ಮಾದಪ್ಪನವರು.—ಎಷ್ಟು ದಿನ ಗಳಲ್ಲಿ ತಯಾರಾಗುತ್ತದೆ ?

(ಉತ್ತರವಿಲ್ಲ.)

———

Government Colleges and Equipment.

Q.—115. **Sri S. SRINIVASA IYENGAR** (T.-Narsipur).—

Will the Government be pleased to state :—

(*a*) the number of Government Colleges—both Intermediate and First Grade—that have been started in the State since 1947 up to 1952 (yearwar information may kindly be furnished);

(*b*) the number of them which have been equipped with (i) their own buildings, (ii) sufficient staff, and (iii) proper equipment ?

A.—**Sri A. G. RAMACHANDRA RAO** (Minister for Law and Education).—

	Inter-mediate.	*Degree.*
(*a*) 1946–47 ...	2	...
1947–48 ...	...	2
1948–49 ...	4	3
1949–40 ...	Nil	Nil
1950–51 ...	,,	,,
1951–52 ...	,,	,,

(*b*) The First Grade College, Mysore has buildings with necessary staff add satisfactory equipment. All other Colleges have been provided with staff and some equipment, but they have no buildings of their own.

Sri S. SRINIVASA IYENGAR.—Will the Government be pleased to state whether these Colleges have been housed in places where they do not own buildings, mostly in other Government buildings wherever they are available ? What is the total amount of expenditure incurred on this account?

Sri A. G. RAMACHANDRA RAO.—Notice.

Sri S. SRINIVASA IYENGAR.—In the answer, it is stated that all other colleges have been provided with staff and some equipment, but they have no buildings of their own. Does it mean that necessary staff has been provided ?

Sri A. G. RAMACHANDRA RAO.—As far as possible.

Sri S. SRINIVASA IYENGAR.—In case there is not the necessary staff in these colleges, do not Government feel that on account of want of staff, the standards of the particular College will be lower ?

Mr. SPEAKER.—The question is disallowed.

ಶ್ರೀ ಎಸ್. ಗೋಪಾಲಗೌಡರು (ಸಾಗರ—ಹೊಸನಗರ).—ಶಿವಮೊಗ್ಗದ ಇಂಟರ್‌ಮೀಡಿಯಟ್ ಕಾಲೇಜನ್ನು ಫಸ್ಟ್‌ಗ್ರೇಡ್ ಕಾಲೇಜಾಗಿ ಮಾರ್ಪಡಿಸಲಾಗುವುದೆ ?

Sri A. G. RAMACHANDRA RAO.—Not possible to say.

———

Primary Schools.

Q.—145. **Sri G. BASAPPA** (Hosadurga).—

Will the Government be pleased to state :—

(*a*) the number of Primary Schools at present in the State ;

(*b*) the number of Primary Schools sanctioned during 1950-51 and 1951-52 (talukwar figures may kindly be furnished) ;

(*c*) the principle on which the schools are sanctioned ?

A.—**Sri A. G. RAMACHANDRA RAO** (Minister for Law and Education).—

(*a*) 10,437.

(*b*) Statement appended below.

(*c*) Generally Primary Schools are sanctioned to single villages or groups of neighbouring villages with a population of 500 and above in Maidan and 200 and above in the Malnad, preference however, being given to villages where buildings for the schools and quarters for the teachers are readily available.